ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: DTE/ADMIO/EST(17)52 /2021

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560001
ದಿನಾಂಕ: 02-12-.2022

**ಸುತ್ತೋಲೆ**

ವಿಷಯ: ತಾಂತ್ರಿಕ ಶಿಕ್ಷಣ ಇಲಾಖೆಯಡಿಲ್ಲಿರುವ ಅನುದಾನಿತ ಇಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಭೋದಕ ವರ್ಗದವರುಗಳಿಗೆ ವೃತ್ತಿ ಪದೋನ್ನತಿ ನೀಡುವ ಬಗ್ಗೆ

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅನುದಾನಿತ ಇಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್‌ಗಳಲ್ಲಿ ಪೂರ್ಣಕಾಲಿಕ ನೆಲೆಯಲ್ಲಿ ಸೇವೆಗೆ ಸೇರಿ ಕಾರ್ಯನಿರ್ವಹಿಸುತ್ತಿರುವ ಬೋಧಕ ವರ್ಗದವರು ಎಐಸಿಟಿಇ 6 ನೇ ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿ ಅಧಿನಿಯಮ 2010, ಮತ್ತು ಎಐಸಿಟಿಇ ಸಿ.ಎ.ಎಸ್ ಅಧಿನಿಯಮ 2012 ಹಾಗೂ ಎಐಸಿಟಿಇ ರವರು ಕಾಲಕಾಲಕ್ಕೆ ಹೊರಡಿಸಿರುವ ಸ್ಪಷ್ಟೀಕರಣಗಳನ್ವಯ ದಿನಾಂಕ:01.03.2019 ರೊಳಗೆ 6 ನೇ ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿಯಲ್ಲಿ ಹಾಲಿ ಎಜಿಪಿ- 9000/- ಪಡೆಯುತ್ತಿದ್ದು, ಎಐಸಿಟಿಇ ನಿಗಧಿಪಡಿಸಿರುವ ಎಲ್ಲಾ ಮಾನದಂಡಗಳನ್ನು ಪೂರೈಸಿರುವ/ಅನುದಾನಿತ ಇಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್‌ಗಳಲ್ಲಿನ ಬೋಧಕ ವರ್ಗದವರುಗಳಿಗೆ ವೃತ್ತಿ ಪದೋನ್ನತಿಕರಿಸಲು ಅಗತ್ಯ ದಾಖಲೆಗಳನ್ನು ಪ್ರಾಂಶುಪಾಲರುಗಳಿಂದ ದೃಢೀಕರಿಸಿ, ದಿನಾಂಕ; 10.12.2022 ರೊಳಗೆ ಸಂಸ್ಥೆಯ IQAC ಸಮಿತಿಗೆ ಸಲ್ಲಿಸತಕ್ಕದ್ದು.

ಮುಂದುವರೆದು, ಸಂಸ್ಥೆಯ IQAC ಸಮಿತಿಯು ಎಲ್ಲಾ ಮಾಹಿತಿ ಮತ್ತು ದಾಖಲೆಗಳನ್ನು ಕ್ರೋಢಿಕರಿಸಿ, ಕೂಲಂಕಷವಾಗಿ ಪರಿಶೀಲಿಸಿ, ಅರ್ಹ ಬೋಧಕ ವರ್ಗದವರ ಪ್ರಸ್ತಾವನೆಯನ್ನು ಸೂಕ್ತ ಶಿಪಾರಸ್ಸಿನೊಂದಿಗೆ ಹಾಗೂ ಅರ್ಹ ಬೋಧಕ ವರ್ಗದವರ ಕಾರ್ಯನಿರ್ವಹಣೆಯ ಬಗ್ಗೆ ತೃಪ್ತಿಕರ ವರದಿ, ಯಾವುದಾದರೂ ನ್ಯಾಯಾಂಗ ಪ್ರಕರಣವಿದ್ದಲ್ಲಿ, ಇಲಾಖಾ ವಿಚಾರಣೆ ಇದ್ದಲ್ಲಿ, ಮಹಾಲೇಖಪಾಲರ ಲೆಕ್ಕ ತಪಾಸಣಾ ಆಕ್ಷೇಪಣೆಗಳಿದ್ದಲ್ಲಿ ಮತ್ತು ಇಲಾಖಾ ಲೆಕ್ಕತಪಾಸಣಾ ಆಕ್ಷೇಪಣೆಗಳಿದ್ದಲ್ಲಿ ಅದರ ಬಗ್ಗೆ ವಿವರಗಳೊಂದಿಗೆ ಸೇವಾ ಪುಸ್ತಕಗಳನ್ನು ಆಯುಕ್ತಾಲಯಕ್ಕೆ ದಿನಾಂಕ;15.12.2022 ರೊಳಗೆ ಸಲ್ಲಿಸತಕ್ಕದ್ದು.

02/12/2022

ನಿರ್ದೇಶಕರು.
ತಾಂತ್ರಿಕ ಶಿಕ್ಷಣ ಇಲಾಖೆ.

ಇವರಿಗೆ,

1) ಎಲ್ಲಾ ಅನುದಾನಿತ ಇಂಜಿನಿಯರಿಂಗ್ ಕಾಲೇಜು/ಪಾಲಿಟೆಕ್ನಿಕ್ ಗಳ ಪ್ರಾಂಶುಪಾಲರುಗಳಿಗೆ- ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ
2) ಎಲ್ಲಾ ಅನುದಾನಿತ ಇಂಜಿನಿಯರಿಂಗ್ ಕಾಲೇಜು /ಪಾಲಿಟೆಕ್ನಿಕ್ ಗಳಲ್ಲಿನ IQAC ಸದಸ್ಯರುಗಳಿಗೆ- ಮುಂದಿನ ಸೂಕ್ತ ಕ್ರಮಕ್ಕಾಗಿ (ಪ್ರಾಂಶುಪಾಲರ ಮುಖಾಂತರ)
3) ಆಯುಕ್ತಾಲಯದ ಇ-ಆಡಳಿತ ವಿಭಾಗಕ್ಕೆ - ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸುವ ಸಲುವಾಗಿ
4) ಆಯುಕ್ತರ ಆಪ್ತ ಶಾಖೆಗೆ- ಮಾಹಿತಿಗಾಗಿ
5) ನಿರ್ದೇಶಕರ ಆಪ್ತ ಶಾಖೆಗೆ-ಮಾಹಿತಿಗಾಗಿ
6) ಜಂಟಿ ನಿರ್ದೇಶಕರ (ಆಡಳಿತ) ಆಪ್ತ ಶಾಖೆಗೆ-ಮಾಹಿತಿಗಾಗಿ
7) ಕಛೇರಿ ಪ್ರತಿ